# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಎನ್.ಎಂ. ಅನ್ನಪೂರ್ಣ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅಸಪ ಸಂಖ್ಯೆ: ಉಪಲೋಕ್/ಜಿಎಲ್‌ಬಿ/7601/2015/ಡಿಆರ್‌ಇ-1, ದಿ:10.03.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ:23.02.2017 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

1) ಶ್ರೀ ಬಸವರಾಜ್ ಶಾಸ್ತ್ರಿ ಬಿನ್ ಸಿದ್ದಪ್ಪ, ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀಮತಿ ಎನ್.ಎಂ. ಅನ್ನಪೂರ್ಣ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ಈ ಪ್ರಕರಣದಲ್ಲಿ ಬಳ್ಳಾರಿ ತಾಲ್ಲೂಕು ಶ್ರೀಧರಗಡ್ಡೆ ಗ್ರಾಮದ ಸರ್ವೆ ನಂ.468 ರಲ್ಲಿ 34*30 ಅಡಿ ವಿಸ್ತೀರ್ಣದ ಆಸ್ತಿಯ ಬಗ್ಗೆ ದಾಖಲೆಗಳನ್ನು ಸೃಷ್ಟಿಸಿ ದಾಖಲೆ ಸಂ.11588/2012-13 ದಿನಾಂಕ:31/1/13 ರ ರೀತ್ಯ ಅದೇ ಗ್ರಾಮದ ಶ್ರೀ ರಾಜಣ್ಣ ಎಂಬುವರ ಹೆಸರಿಗೆ ಎದುರುದಾರರು ಕಾನೂನುಬಾಹಿರವಾಗಿ ಖಾತೆ ಮಾಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರಿಗೆ ಆದೇಶಿಸಲಾಗಿತ್ತು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ಇವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಬಳ್ಳಾರಿ ಇವರ ಮೂಲಕ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ದೂರಿನಲ್ಲಿ ತಿಳಿಸಿದಂತೆ ಪ್ರಸ್ತಾಪಿಸಿದ ಸ.ನಂ.468 ಆಸ್ತಿ ನಂಬರ್ ಆಗಿರುವುದಿಲ್ಲ. ಸದರಿ ಸ್ಥಳವು ಸ.ನಂ 267 ಗ್ರಾಮನತ್ತ ಸ್ಥಳವಾಗಿರುತ್ತದೆ. 468 ಆಸ್ತಿ ಸಂಖ್ಯೆಯಾಗಿರುತ್ತದೆ. ಸದರಿ ಆಸ್ತಿಯು ಶ್ರೀ ರಾಜಣ್ಣ ತಂದೆ ನಾಗಪ್ಪನ ಹೆಸರಿನಲ್ಲಿರುತ್ತದೆ. ಈ ಆಸ್ತಿಯು ಗ್ರಾಮ ಪಂಚಾಯಿತಿ ದಾಖಲೆಗಳ ಪ್ರಕಾರ ಉದ್ದ ಅಳತೆಯು ಪೂ.ಪ.4.20 ಮೀಟರ್ ಉ.ದ 5.00 ಇದ್ದು ಮಾಲೀಕತ್ವದ ಕುರಿತು ದಾಖಲೆಗಳನ್ನು ಪರಿಶೀಲಿಸಲಾಗಿ ಶ್ರೀ ರಾಜಣ್ಣ ತಂದೆ ನಾಗಪ್ಪ ಹೆಸರಿನಲ್ಲಿ ಬದಲಾವಣೆಯಾದ ಬಗ್ಗೆ ದಾಖಲೆಗಳು ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುವುದಿಲ್ಲ. ಗ್ರಾಮ ಪಂಚಾಯಿತಿಯಿಂದ ನಮೂನೆ-9 ಮತ್ತು 11 ಪಡೆದು ಆಸ್ತಿಯನ್ನು ಶ್ರೀಮತಿ.ಬಸಮ್ಮ ಹೆಸರನಲ್ಲಿ ಉಪ ನೋಂದಣೆ ಕಛೇರಿಯಲ್ಲಿ ದಸ್ತಾವೇಜು ಮಾಡಿಕೊಟ್ಟಿರುತ್ತಾರೆ. ಗ್ರಾಮ ಪಂಚಾಯಿತಿ ದಾಖಲೆಗಳ ಪ್ರಕಾರ ಅಳತೆಗಿಂತ ಹೆಚ್ಚಿನ ಅಳತೆಗೆ ನಮೂನೆ-9 ಮತ್ತು 11 ನ್ನು ನೀಡಿದ್ದು, ಸದರಿ ಉದ್ದ ಅಳತೆಯು ತಪ್ಪಾಗಿರುತ್ತದೆ ಪ್ರಯುಕ್ತ ರದ್ದುಪಡಿಸಲು ಪಂಚಾಯತ್ ಅಭಿವೃದ್ಧಿ

ಅಧಿಕಾರಿಯವರಿಗೆ ತಿಳಿಸಿರುವುದಾಗಿ ತಿಳಿಸಿರುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಬಳ್ಳಾರಿ ಇವರು ನೀಡಿರುವ ವರದಿಯ ಹಿನ್ನೆಲೆಯಲ್ಲಿ ಶ್ರೀಮತಿ ಎನ್.ಎಂ. ಅನ್ನಪೂರ್ಣ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ, ಬಳ್ಳಾರಿ ಇವರಿಗೆ ಕಾರಣ ಕೇಳಿ ನೋಟೀಸು ಜಾರಿಮಾಡಲಾಗಿದೆಯೆಂದು ತಿಳಿಸಿರುತ್ತಾರೆ.

4) ವಿಚಾರಣಾ ವರದಿಯ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಬಳ್ಳಾರಿ ತಾಲ್ಲೂಕು, ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯ ತೆರಿಗೆ ಬೇಡಿಕೆ ರಿಜಿಸ್ಟರ್‌ನಲ್ಲಿ ಸುಮಾರು ವರ್ಷಗಳಿಂದ (2003-04) ರಿಂದ) ಆಸ್ತಿ ಸಂ.468 ಶ್ರೀ ಆರ್. ರಾಜಣ್ಣ ತಂದೆ ನಾಗಪ್ಪ ಇವರ ಹೆಸರಿನಲ್ಲಿರುತ್ತದೆ. ಈಗಲೂ ಶ್ರೀ ಆರ್. ರಾಜಣ್ಣ ತಂದೆ ನಾಗಪ್ಪ ಇವರ ಹೆಸರಿನಲ್ಲಿರುತ್ತದೆ. ಬೇರೆಯವರ ಹೆಸರಿಗೆ ಬದಲಾವಣೆ ಮಾಡಲಾಗಿರುವುದಿಲ್ಲ. ಕರ್ನಾಟಕ ಪಂಚಾಯತ್ ರಾಜ್ ನಿಯಮಗಳು 2006 ರ ನಮೂನೆ 9 ಮತ್ತು 11 ನ್ನು ಅನುಕ್ರಮವಾಗಿ ತೆರಿಗೆಗೆ ಒಳಪಟ್ಟು ಕಟ್ಟಡ ಮತ್ತು ಭೂಮಿಗೆ ಸಂಬಂಧಿಸಿದ ತೆರಿಗೆ ನಿರ್ಧರಣಾ ಪಟ್ಟಿ ಮತ್ತು ಭೂಮಿ ಮತ್ತು ಕಟ್ಟಡಗಳ ತೆರಿಗೆ ಬಾಬ್ತು ಬೇಡಿಕೆ, ವಸೂಲಾತಿ ಮತ್ತು ಬಾಕಿ ರಿಜಿಸ್ಟರ್ ಆಗಿರುತ್ತದೆ. ಸದರಿ ದಾಖಲಾತಿಗಳು ತೆರಿಗೆ ಪಾವತಿದಾರರಿಗೆ ಯಾವುದೇ ರೀತಿಯ ಮಾಲೀಕತ್ವದ ಹಕ್ಕನ್ನು ದೃಢೀಕರಿಸುವುದಿಲ್ಲ. ಶ್ರೀ ರಾಜಣ್ಣ ಇವರಿಗೆ 468 ಆಸ್ತಿಗೆ ನೀಡಿರುವ ನಮೂನೆ-9 ಮತ್ತು 11 ರಲ್ಲಿ ಅಳತೆ ವ್ಯತ್ಯಾಸ ಆಗಿರುವುದು ಬೇರೆ ಕಛೇರಿಯ ಕೆಲಸದ ಒತ್ತಡದಲ್ಲಿ ಕಣ್ತಪ್ಪಿನಿಂದ ಆಗಿರಬಹುದೇ ವಿನಃ ಯಾವುದೇ ಉದ್ದೇಶಪೂರ್ವಕವಾಗಿರುವುದಿಲ್ಲ. ತಡವಾಗಿ ಅದು ಅವರ ಗಮನಕ್ಕೆ ಬಂದಿದ್ದರಿಂದ, ಸರಿಪಡಿಸಬೇಕೆನ್ನುವಷ್ಟರಲ್ಲಿ ಬೇರೆ ಕೆಲಸಗಳ ಒತ್ತಡದಲ್ಲಿ ಹಾಗೂ ಅವರ ಆರೋಗ್ಯದ ಸ್ಥಿತಿ ಹದಗೆಟ್ಟಿದ್ದರಿಂದ ಸರಿಪಡಿಸಲು ಸಾಧ್ಯವಾಗಿರುವುದಿಲ್ಲ. ದೂರುದಾರರಾದ ಬಸವರಾಜ್‌ಶಾಸ್ತ್ರಿ ಇವರು ಪ್ರಿನ್ಸಿಪಾಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ಬಳ್ಳಾರಿ ನ್ಯಾಯಾಲಯದಲ್ಲಿ ಅಸಲು ದಾವೆ 366/13 ನ್ನು ಹೂಡಿದ್ದು, ಆರ್ ರಾಜಣ್ಣ, ಬಸಮ್ಮ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶ್ರೀಧರಗಡ್ಡೆ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಬಳ್ಳಾರಿ ಇವರುಗಳನ್ನು ಪ್ರತಿವಾದಿಗಳನ್ನಾಗಿ ಮಾಡಿರುತ್ತಾರೆ. ಆಸ್ತಿ ಸಂ.468 ರಲ್ಲಿ ಕಟ್ಟಡ ಪರವಾನಗಿಗಾಗಿ ಆರ್ ರಾಜಣ್ಣ ಅರ್ಜಿ ಸಲ್ಲಿಸಿದ್ದು, ಅದಕ್ಕೆ ಎಂ.ಬಸವರಾಜಶಾಸ್ತ್ರಿ ಆಕ್ಷೇಪಿಸಿರುತ್ತಾರೆ. ಈ ವಿಷಯವಾಗಿ ಗೊಂದಲವಿರುವುದರಿಂದ ಸೂಕ್ತ ಮಾರ್ಗದರ್ಶನ ಕೋರಿ ಮೇಲಾಧಿಕಾರಿಗಳಾದ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆಯಲಾಗಿತ್ತು. ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದಾಖಲೆಗಳೊಂದಿಗೆ ಹಾಜರಾಗುವಂತೆ ರಾಜಣ್ಣ ಮತ್ತು ಬಸವರಾಜಶಾಸ್ತ್ರಿಯವರಿಗೆ ನೋಟೀಸು ನೀಡಿದ್ದು, ಬಸವರಾಜಶಾಸ್ತ್ರಿಯವರು ಸಭೆಗೆ ಹಾಜರಾಗದೇ ಇರುವ ಕಾರಣ. ಆರ್ ರಾಜಣ್ಣ ಇವರೇ ನಿಜವಾದ ಖಾತೆದಾರರೆಂದು ಇತ್ಯರ್ಥ ಪಡಿಸಿಕೊಂಡು ಪ್ರಕರಣವನ್ನು ಮುಕ್ತಾಯಗೊಳಿಸಲು ಆದೇಶ ನೀಡಿರುತ್ತಾರೆ. ಅದರಂತೆ ಆರ್.ರಾಜಣ್ಣ ಇವರಿಗೆ ಕಟ್ಟಡ ಪರವಾನಗಿ ನೀಡಲಾಗಿದೆ. ಆಸ್ತಿ ಸಂ.468 ಗ್ರಾಮ ಪಂಚಾಯಿತಿ ತೆರಿಗೆ ಬೇಡಿಕೆ ರಿಜಿಸ್ಟರ್‌ನಲ್ಲಿ ಆರ್.ರಾಜಣ್ಣ ತಂದೆ ನಾಗಪ್ಪ ಇವರ ಹೆಸರಿನಲ್ಲಿದ್ದು, ಬೇರೆಯವರ ಹೆಸರಿಗೆ ವರ್ಗಾಯಿಸಿರುವುದಿಲ್ಲ. ಮತ್ತು ನೀಡಲಾದ ಪರವಾನಗಿಯನ್ನು ಮೇಲಾಧಿಕಾರಿಗಳ ಆದೇಶದ ಮೇರೆಗೆ ರದ್ದುಪಡಿಸಲಾಗಿದೆ. ಈ ರೀತಿಯಾಗಿ ಅವರು ಯಾವುದೇ ಕರ್ತವ್ಯಚ್ಯುತಿ ಎಸಗಿರುವುದಿಲ್ಲವೆಂದು ಹೇಳಿರುತ್ತಾರೆ.

5) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಎನ್.ಎಂ.ಅನ್ನಪೂರ್ಣಮ್ಮ, ಪಿ.ಡಿ.ಓ, ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಗೆ ಬಂದನಂತರ ಆರ್ ರಾಜಣ್ಣನೊಂದಿಗೆ ಶಾಮೀಲಾಗಿ ಲಂಚ ಪಡೆದು ಗ್ರಾಮಠಾಣಕ್ಕೆ ಸೇರಿದ ನಿವೇಶನವನ್ನು ಸಂಬಂಧಪಟ್ಟ ಕಾಗದಪತ್ರಗಳನ್ನು ಸೃಷ್ಟಿ ಮಾಡಿರುತ್ತಾರೆ. ಪಿ.ಡಿ.ಓ ರವರು ನಮೂನೆ-9 ಮತ್ತು 11 ನ್ನು ಸೃಷ್ಟಿ ಮಾಡಿದ್ದಾರೆ. ಬಳ್ಳಾರಿ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಪಿ.ಡಿ.ಓ ರವರಿಗೆ ನೋಟೀಸ್ ಕೊಟ್ಟಾಗ್ಯೂ ಮೇಲಾಧಿಕಾರಿಗಳ ಆದೇಶವನ್ನು ಪಾಲನೆ ಮಾಡಲಿಲ್ಲವೆಂದು ಹೇಳಿರುತ್ತಾರೆ.

6) ದೂರುದಾರರ ದೂರನ್ನು ಪರಿಶೀಲಿಸಿದಾಗ, ರಾಜಣ್ಣರವರ ಹೆಸರಿಗೆ ಕಾನೂನು ಬಾಹಿರವಾಗಿ ಖಾತೆಯನ್ನು ಮಾಡಿರುತ್ತಾರೆಂದು ದೂರುದಾರರು ಆಪಾದಿಸಿರುವುದಾಗಿದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ವರದಿಯನ್ನು ಪರಿಶೀಲಿಸಿದಾಗ, ಗ್ರಾಮ ಪಂಚಾಯಿತಿ ದಾಖಲೆಗಳ ಪ್ರಕಾರ ಅಳತೆಗಿಂತ ಹೆಚ್ಚಿನ ಅಳತೆಗೆ ನಮೂನೆ-9 ಮತ್ತು 11 ನ್ನು ನೀಡಿದ್ದು, ಸದರಿ ನೋಂದಣಿಯಾದ ದಾಖಲೆಗಳನ್ನು ರದ್ದುಪಡಿಸಬೇಕು ಹಾಗೂ ಕಟ್ಟಡ ಪರವಾನಗಿ ನೀಡಿರುವ ಉದ್ದ ಅಳತೆ ತಪ್ಪಾಗಿರುತ್ತದೆ. ಆ ಪ್ರಯುಕ್ತ

ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಗೆ ದಿ.22.05.2015 ರಂದು ಕಾರಣ ಕೇಳುವ ನೋಟಿಸ್ಸನ್ನು ಜಾರಿ ಮಾಡಲಾಗಿದೆಯೆಂದು ಹೇಳಿರುವುದು ಕಂಡುಬರುತ್ತದೆ. ಸದರಿ ಅಂಶವನ್ನು ಗಮನಿಸಿದಾಗ, ಎದುರುದಾರರು ನಿಜವಾದ ಅಳತೆಗಿಂತ ಹೆಚ್ಚಿನ ಅಳತೆಗೆ ನಮೂನೆ-9 ಮತ್ತು 11 ನ್ನು ನೀಡಿದ್ದು ಕಂಡುಬರುತ್ತದೆ ಮತ್ತು ಉದ್ದ ಅಳತೆಯನ್ನು ತಪ್ಪಾಗಿ ನಮೂದಿಸಿ ಕಟ್ಟಡ ಪರವಾನಗಿಯನ್ನು ಕೂಡ ನೀಡಿರುವುದು ಕಂಡುಬರುತ್ತದೆ. ನಿಜವಾಗಿ ಕೊಡಬೇಕಾಗಿದ್ದ ಅಳತೆಗೆ ದಾಖಲಾತಿಗಳನ್ನು ಕೊಡದೇ ಹೆಚ್ಚಿನ ಅಳತೆಗೆ ದಾಖಲಾತಿಗಳನ್ನು ನೀಡಿರುವುದು ಎದುರುದಾರರ ಕರ್ತವ್ಯಲೋಪವನ್ನು ತೋರಿಸುತ್ತದೆ. ಹೆಚ್ಚು ವಿಸ್ತೀರ್ಣ ನಮೂದಿಸಿ ದಾಖಲಾತಿಗಳನ್ನು ನೀಡಿದ ಬಗ್ಗೆ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಯಾವುದೇ ಸಮಜಾಯಿಷಿಯನ್ನು ನೀಡಿರುವುದಿಲ್ಲ. ಸದರಿ ಅಂಶಗಳನ್ನು ಗಮನಿಸಿದಾಗ, ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುವ ಕಾರಣ, ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

7) ಆದುದರಿಂದ, ಎದುರುದಾರರ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಮತ್ತು ದೂರುದಾರರ ದೂರನ್ನು ಅಲ್ಲಗಳೆಯಲು ಯಾವುದೇ ಸಮಂಜಸ/ಸಮರ್ಪಕ ಉತ್ತರವನ್ನು ತಮ್ಮ ಆಕ್ಷೇಪಣೆಯಲ್ಲಿ ನೀಡಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ.

8) ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

9) ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ ನಿಯಮ 3 (i) (ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14-ಎ ರ ಅಡಿಯಲ್ಲಿ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಈ ಹಿನ್ನೆಲೆಯಲ್ಲಿ ಶ್ರೀಮತಿ ಎನ್.ಎಂ. ಅನ್ನಪೂರ್ಣ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3 (i) (ii) ಮತ್ತು (iii) ರಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಾಮವಳಿ 1957 ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/233/ಗ್ರಾಪಂಕಾ/2017 ಬೆಂಗಳೂರು, ದಿನಾಂಕ- 31-03-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಎನ್.ಎಂ. ಅನ್ನಪೂರ್ಣ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರ

ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. ಷರಾ: ಪುಟ ಸಂಖ್ಯೆ: 1 ರಿಂದ 166).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಳ್ಳಾರಿ ತಾಲ್ಲೂಕು, ಮತ್ತು ಬಳ್ಳಾರಿ ಜಿಲ್ಲೆ.
6. ಶ್ರೀಮತಿ ಎನ್.ಎಂ. ಅನ್ನಪೂರ್ಣ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ಗಣಕ ಕೋಶ.